<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ</u>

<u>ಕ್ರಿಮಿನಲ್ ಮೊಕದ್ದಮೆ ನಂಃ 329/2016</u>

ಸಿ.ಡಬ್ಲ್ಯೂ- 13 ಪಿ.ಡಬ್ಲ್ಯೂ-2

| | |
|---|---|
| ಸಾಕ್ಷಿಯ ಹೆಸರು | ಃ ರಾಮಣ್ಣ ಬಿರಾದಾರ |
| ತಂದೆಯ ಹೆಸರು | ಃ ಸಿದ್ದಪ್ಪ |
| ವಯಸ್ಸು | ಃ 57 ವರ್ಷ |
| ಉದ್ಯೋಗ | ಃ ಸಿ.ಪಿ.ಐ, ನವನಗರ |
| ವಾಸಸ್ಥಳ | ಃ ಬಾಗಲಕೋಟೆ |

ದಿನಾಂಕಃ 20-02-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ</u> ಸಸಅ ರವರಿಂದಃ

ನಾನು ದಿ.21-09-2013 ರಿಂದ ದಿ.15-12-2016 ವರೆಗೆ ಅಮಿನಗಡ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ. ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 19-01-2016 ರಂದು ಮ.3-30 ಗಂಟೆಗೆ ನಾನು ಅಮೀನಗಡ ಠಾಣೆಯಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ಪಿರ್ಯಾದಿಯನ್ನು ನೀಡಿದ್ದು, ಸದರಿ ಪಿರ್ಯಾದಿ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ 06/2016 ರಡಿ ಪ್ರಕರಣವನ್ನು ದಾಖಲಿಸಿಕೊಂಡು, ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಗುನ್ನೆ ಜಾಗೆಗೆ ಭೇಟಿ ನೀಡಿ, ಚಾಸಾ-1 ರವರು ತೋರಿಸಿದ ಗುನ್ನೆ ಸ್ಥಳ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ.5-00 ರಿಂದ 6-00 ಗಂಟೆ ವರೆಗೆ ಮಾಡಿ, ಸ್ಥಳದಿಂದ ಅಪಘಾತಕ್ಕೆ ಒಳಪಟ್ಟ ಎರಡು ವಾಹನಗಳನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-5 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 20-01-2016 ರಂದು ಚಾಸಾ-10 ಮತ್ತು 1 ರವರಿಗೆ ನೋಟಿಸನ್ನು ನೀಡಿ, ಅದೇ ದಿನ ಚಾಸಾ-10 ಮತ್ತು 1 ರವರಿಂದ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-10 ರವರು ನಷ್ಟಭರ್ತಿ ಪ್ರಮಾಣ ಪತ್ರವನ್ನು ನೀಡಿದ್ದರಿಂದ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಕ್ಯಾಂಟರ್ ವಾಹನ ಮಾಲಿಕನು ನಷ್ಟಭರ್ತಿ ಪ್ರಮಾಣ ಪತ್ರವನ್ನು ನೀಡಿದ್ದರಿಂದ ಕ್ಯಾಂಟರ್ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಅದೇ ಆರೋಪಿ ಠಾಣೆಗೆ ಹಾಜರಾದ ಮೇರೆಗೆ ಆತನನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ದಿಃ 15-02-2016 ರಂದು ಚಾಸಾ-4 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ದಿಃ16-02-2016 ರಂದು ಎಂ.ವಿ.ಎ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕಃ 16-02-2016 ರಂದು ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪ್ರಮಾಣ ಪತ್ರವನ್ನು ನೀಡಿದ್ದರಿಂದ ಕೆಎಸ್.ಆರ್.ಟಿ.ಸಿ ಬಸ್ಸನ್ನು ಬಿಡುಗಡೆ ಮಾಡಿರುತ್ತೇನೆಂದು, ಅದೇ ದಿನ ಕ್ಯಾಂಟರ್ ವಾಹನ ಮಾಲಿಕನು ನಷ್ಟಭರ್ತಿ ಪ್ರಮಾಣ ಪತ್ರವನ್ನು ನೀಡಿದ್ದರಿಂದ ಕ್ಯಾಂಟರ್ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಅದೇ ಆರೋಪಿ ಠಾಣೆಗೆ ಹಾಜರಾದ ಮೇರೆಗೆ ಆತನನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಿ, ದಿಃ 15-02-2016 ರಂದು ಚಾಸಾ-4 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು, ದಿಃ16-02-2016 ರಂದು ಎಂ.ವಿ.ಎ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡು, ದಿನಾಂಕಃ 16-02-2016 ರಂದು ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.